**ದಿನಾಂಕಃ 22-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 7(ಎ)ನೇ ಪ್ರತಿವಾದಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

1. ಕ್ರಮ ಸಂಖ್ಯೆ-6 ನೇ ಆಸ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನೋಡಿಲ್ಲ. ಮೃತ ಪ್ರತಿವಾದಿ ನಂಬರ 7 ರವರು ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು 4 ನೇ ಪ್ರತಿವಾದಿಯಿಂದ ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು ಕೊನರೆಡ್ಡಿಯವರ ಕಡೆಯಿಂದ ಖರೀದಿ ಮಾಡಿದ್ದು, ಎಷ್ಟು ಹಣಕ್ಕೆ ಮತ್ತು ಯಾವ ದಿನಾಂಕದಂದು ಅಂತಾ ನನಗೆ ಗೊತ್ತಿಲ್ಲ. ದಿನಾಂಕ 13-06-2011 ರಂದು 4 ನೇ ಪ್ರತಿವಾದಿ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು ಕೊನರೆಡ್ಡಿಯವರ ಕಡೆಯಿಂದ ರೂ. 8 ಲಕ್ಷಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 8 ಲಕ್ಷ ಹಣವನ್ನು 4 ನೇ ಪ್ರತಿವಾದಿ ಕೊನರೆಡ್ಡಿಯವರಿಗೆ ಯಾವ ರೀತಿಯಿಂದ ಕೊಟ್ಟರು ಅಂತಾ ನನಗೆ ಮಾಹಿತಿ ಇಲ್ಲ. 4 ನೇ ಪ್ರತಿವಾದಿ ಕೊನರೆಡ್ಡಿಯವರ ಕಡೆಯಿಂದ ಆಸ್ತಿ ಖರೀದಿ ಮಾಡಿದಾಗ, ಅದು ಖಾಲಿ ನಿವೇಶನ ಇತ್ತು. ಅದರಲ್ಲಿ ಮನೆಯನ್ನು 4 ನೇ ಪ್ರತಿವಾದಿ ಯಾವ ವರ್ಷದಲ್ಲಿ ಕಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. 2011 ನೇ ಇಸ್ವಿಯಲ್ಲಿ 4 ನೇ ಪ್ರತಿವಾದಿ ಎಸ್.ಬಿ.ಐ ಬ್ಯಾಂಕ ಹುಬ್ಬಳ್ಳಿ ಶಾಖೆಯಲ್ಲಿ 20,53,000/- ಸಾಲ ಮಾಡಿ ಮನೆ ಕಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಸಾಲದ ಹಣವನ್ನು 4 ನೇ ಪ್ರತಿವಾದಿ ತನ್ನ ಸಂಬಳದಿಂದ ಪ್ರತಿ ತಿಂಗಳು ಕಟ್ಟುತ್ತಾ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಸಾಲವನ್ನು 4 ನೇ ಪ್ರತಿವಾದಿ ಹೇಗೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ರಾಣೆಬೆನ್ನೂರಿನಲ್ಲಿ 4 ನೇ ಪ್ರತಿವಾದಿಯ ಹೆಸರಿಗೆ ಒಂದು ಸೈಟು ಇತ್ತು, ಅದನ್ನು 8 ಲಕ್ಷಕ್ಕೆ ಮಾರಾಟ ಮಾಡಿ ಸಾಲ ತೀರಿಸಿರುತ್ತಾರೆ ಅಂತಾ ನುಡಿಯುತ್ತಾರೆ. ರಾಣೆಬೆನ್ನೂರಿನಲ್ಲಿರುವ ಸದರಿ ಸೈಟ ನಂಬರ ನನಗೆ ಹೇಳಲು ಬರುವುದಿಲ್ಲ. ರಾಣೆಬೆನ್ನೂರಿನ ಪ್ಲಾಟನ್ನು ಒಟ್ಟು ಕುಟುಂಬದ ಆದಾಯದಿಂದ 4 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಲಾಗಿತ್ತು. ಈ ಸಂಬಂಧ ಖರೀದಿ ಪತ್ರ, ಉತಾರೆ ಹಾಗೂ ಮಾರಾಟ ಮಾಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಯಾವ ವರ್ಷದಲ್ಲಿ 4 ನೇ ಪ್ರತಿವಾದಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು, ಯಾವ ವರ್ಷದಲ್ಲಿ ಪೂರ್ತಿಯಾಗಿ ಮರು ಪಾವತಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ರಾಣೆಬೆನ್ನೂರಿನ ಪ್ಲಾಟನ್ನು ಮಾರಾಟ ಮಾಡಿ, 4 ನೇ ಪ್ರತಿವಾದಿ ಕ್ರಮ ಸಂಖ್ಯೆ-6 ನೇ ಆಸ್ತಿಯ ಸಾಲ ತೀರಿಸಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲಿ ಅಥವಾ ನನ್ನಪ್ರತಿವಾದ ಪತ್ರದಲ್ಲಾಗಲಿ 4 ನೇ ಪ್ರತಿವಾದಿ ರಾಣೆಬೆನ್ನೂರಿನಲ್ಲಿದ್ದ ಪ್ಲಾಟನ್ನು ಮಾರಿ ಸಾಲ ತೀರಿಸಿರುತ್ತಾನೆ ಅಂತಾ ಬರೆಸಿಲ್ಲ. ಇದೇ ಮೊದಲ ಬಾರಿ ಹುಟ್ಟಿಸಿಕೊಂಡು ಈ ವಿಷಯವನ್ನು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮೂರಿನಲ್ಲಿ ಲೈಬ್ರರಿ ಇದೆ ಎಂದರೆ ಸಾಕ್ಷಿ ಇತ್ತೀಚೆಗೆ ಆಗಿದೆ ಅಂತಾ

ನುಡಿಯುತ್ತಾರೆ. ನಮ್ಮೂರಿಗೆ ನ್ಯೂಸ್ ಪೇಪರಗಳು ಬರುತ್ತವೆ ಎಂದರೆ ಸರಿ. ಮೃತ 7 ನೇ ಪ್ರತಿವಾದಿ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು ಖರೀದಿ ಮಾಡುವುದಕ್ಕಿಂತ ಮೊದಲು ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ, ಮುಂಜಾಗ್ರತೆಗಳನ್ನು ಕೈಗೊಂಡೆ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 2011 ನೇ ಸಾಲಿನಲ್ಲಿ 4 ನೇ ಪ್ರತಿವಾದಿ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಇತ್ತು, ಕೋರ ಪಾಲಿನಲ್ಲಿ ಬೇರೆಯವರ 8 ಎಕರೆ ಜಮೀನನ್ನು ಮಾಡುತ್ತಿದ್ದೆ ಅಂತಾ ನುಡಿಯುತ್ತಾರೆ. ಈ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು 4 ನೇ ಪ್ರತಿವಾದಿ ಖರೀದಿ ಮಾಡುವಾಗ ಹಣಕಾಸಿನ ಸಹಾಯ ಮಾಡಲು ನನ್ನ ಬಳಿ ಆದಾಯ ಇತ್ತು ಅಂತಾ ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ. ಕ್ರಮ ಸಂಖ್ಯೆ-6 ನೇ ಆಸ್ತಿಯು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ನನಗಾಗಲಿ, ಉಳಿದ ಪ್ರತಿವಾದಿಯರಿಗಾಗಲಿ ಅಥವಾ ವಾದಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

4. ಪ್ರಸ್ತುತ ಕ್ರಮ ಸಂಖ್ಯೆ-6 ನೇ ಆಸ್ತಿ ಈಗ ಪ್ರತಿವಾದಿ 7(ಎ) ರವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. 7 ನೇ ಪ್ರತಿವಾದಿ ತನ್ನ ಮಗನ ಹೆಸರಿಗೆ ದಿನಾಂಕ 28-08-2020 ರಂದು ನೋಂದಾಯಿತ ಭಕ್ಷೀಸ್ ಪತ್ರದ ಮೂಲಕ ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು

ವರ್ಗಾವಣೆ ಮಾಡಿದ್ದು, ಈಗ ಪ್ರತಿವಾದಿ ನಂಬರ 7(ಎ) ರವರು ಸದರಿ ಆಸ್ತಿಯ ಸಂಪೂರ್ಣ ಮಾಲೀಕರಿರುತ್ತಾರೆ ಎಂದರೆ ಗೊತ್ತಿಲ್ಲ. ಇವತ್ತಿಗೂ ಸಹಾ ಪ್ರತಿವಾದಿ ನಂಬರ 7(ಎ) ರವರು ಸದರಿ ಆಸ್ತಿಯಲ್ಲಿ ತನ್ನ ಕುಟುಂಬದೊಂದಿಗೆ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹಾ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ-6 ನೇ ಆಸ್ತಿಯನ್ನು ಪ್ರತಿವಾದಿ ನಂಬರ 7 ರವರು ಯೋಗ್ಯ ಮಾರುಕಟ್ಟೆ ಬೆಲೆ ಕೊಟ್ಟು ಖರೀದಿಸಿದ್ದು, ಅವರು ಬೋನಾಫೈಡ ಪರ್ಚೇಜರ ಇರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ಕ್ರಮ ಸಂಖ್ಯೆ-6 ನೇ ಆಸ್ತಿಯ ಮೇಲೆ ಯಾವುದೇ ಹಕ್ಕು ಇರದೇ ಇದ್ದರೂ ಸಹಾ, ಅದು ಒಟ್ಟು ಕುಟುಂದಬ ಆಸ್ತಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.